ಜನಮಾಧ್ಯಮ

ಉತ್ತರಕನ್ನಡ ಜಿಲ್ಲೆಯ ಹೆಮ್ಮೆ ಕೆಎಲ್ಎಸ್ ವಿಡಿಐಟಿ

ಕರ್ನಾಟಕ ಲಾ ಸೊಸೈಟಿ (ಕೆ. ಎಲ್. ಎಸ್.) ಬೆಳಗಾವಿಯು ವಿಶ್ವನಾಥರಾವ್ ದೇಶಾಂಡೆ ತಾಂತ್ರಿಕ ಮಹಾವಿದ್ಯಾಲಯವನ್ನು ಹಳಿಯಾಳದಲ್ಲಿ 2004ರಲ್ಲಿ ಪ್ರಾರಂಭಿಸಿತು. 28 ಎಕರೆ ಆಹ್ಲಾದಕರ ಪರಿಸರದಲ್ಲಿ ಸ್ಥಾಪಿತವಾಗಿರುವ ಮಹಾವಿದ್ಯಾಲಯವು, ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪ್ರಾರಂಭಗೊಂಡು, ಇಂದು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಮಹಾವಿದ್ಯಾಲಯವು ವಿಟಿಯು ನವದೆಹಲಿಯಿಂದ ಅನುಮೋದನೆ ಗೊಂಡಿದ್ದು, ವಿ ತಾ ವಿ ಬೆಳಗಾವಿಯ ಸಂಯೋಜನೆಗೆ ಒಳಪಟ್ಟಿದೆ. ಕೆ. ಎಲ್. ಎಸ್. ಆಡಳಿತ ಸಂಸ್ಥೆಯ ಸಮರ್ಥ ಮಾರ್ಗದರ್ಶನ ಹಾಗೂ ಎಲ್ಲ ಸಿಬ್ಬಂದಿಗಳ ಅವಿರತ ಕಾರ್ಯದ ಫಲವಾಗಿ ಮಹಾವಿದ್ಯಾಲಯವು ಉತ್ತಮ ನಾಗರಿಕ ಆಭರಣಗಳನ್ನು ಕಳೆದ 20 ವರ್ಷದಿಂದ ದೇಶಕ್ಕೆ ಕೊಡುಗೆ ನೀಡುತ್ತಲಿದೆ. 100 ಕ್ಕೂ ಅಧಿಕ ಸುರಿತ, ಅನುಭವಿ ಬೋಧಕ ಸಿಬ್ಬಂದಿಗಳು, 1500ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನಿರತರಾಗಿದ್ದಾರೆ. **ಕಂಪ್ಯೂಟರ್ ಸೈನ್ಸ್, ಸಿವಿಲ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟಾನಿಕ್ಸ್, ಎಲೆಕ್ಟಾನಿಕ್ಸ್ ಮತ್ತು ಕಮ್ಯುನಿಕೇಷನ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮಷೀನ್ ರ್ಲರ್ನಿಂಗ್ (ಎ. ಐ. & ಎಂ. ಎಲ್)** ಹಾಗೂ **ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಕೋರ್ಸ್**ಗಳನ್ನು ಹೊಂದಿದೆ. ಇಂಡಸ್ಟ್ರಿಯಲ್ ಎಲೆಕ್ಟಾನಿಕ್ಸ್ ಮತ್ತು ಥರ್ಮಲ್ ಇಂಜಿನಿಯರಿಂಗ್ ಎಂಬ 2 ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಹೊಂದಿದೆ. ವಿಶಾವಿ ಬೆಳಗಾವಿಯಿಂದ ಮಾನ್ಯತೆ ಪಡೆದ 7 **ಸಂಶೋಧನಾ ಕೇಂದ್ರ**ವನ್ನು ಮಹಾವಿದ್ಯಾಲಯ ಹೊಂದಿದೆ. **ಮಹಾವಿದ್ಯಾಲಯದ ವಿಕ್ಷಕರು 25 ಕ್ಕೂ ಹೆಚ್ಚು ಪೇಟೆಂಟ್‌ಗಳನ್ನು ದಾಖಲಿಸಿದ್ದಾರೆ** ಮತ್ತು ಉತ್ತಮ ಗುಣಮಟ್ಟದ ಅಂತಾರಾಷ್ಟ್ರೀಯ ಮಟ್ಟದ ತಾಂತ್ರಿಕ ಪ್ರಬಂಧ ಲೇಖನ ರಚಿಸಿ ಪ್ರಕಂಸೆ ಪಡೆದಿದ್ದಾರೆ.

ಮಹಾವಿದ್ಯಾಲಯವು ಸುಸಜ್ಜಿತ ಬೋಧನಾ ಕೊಠಡಿ, ಪ್ರಯೋಗಾಲಯ , ಸ್ಮಾರ್ ರೂಮ್, ಗ್ರಂಥಾಲಯ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿಗೃಹ ವ್ಯವಸ್ಥೆ, ಶುದ್ಧ ಕುಡಿಯುವ ನೀರು, ಶುಚಿತ್ವ ಹೊಂದಿರುವ ಭೋಜನ ಶಾಲೆ ವ್ಯವಸ್ಥೆಯನ್ನು ಹೊಂದಿದೆ. ಹುಬ್ಬಳ್ಳಿ ಧಾರವಾಡ, ಬೆಳಗಾವಿ ಹಾಗೂ ದಾಂಡೇಲಿಯಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದೆ. ವಿದ್ಯಾರ್ಥಿನಿಯರಿಗೊಸ್ಕರ ಪ್ರತ್ಯೇಕವಾಗಿ ಪಿಂಕ್ ಬಸ್ ಸೌಲಭ್ಯವನ್ನು ಸಹ ಹೊಂದಿದೆ. ಕೈಗಾರಿಕಾ ಕ್ಷೇತ್ರದ ಅವಶ್ಯಕತೆಗಳನ್ನು ಆರಿತು ಪಠ್ಯಕ್ರಮದ ಹೊರತಾಗಿ ಆಡ್ ಆನ್ ಕೋರ್ಸ್ ಗಳನ್ನು ನೀಡುತ್ತಿದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರವು ಬಯಸುವ ಕೌಶಲ್ಯಗಳು ಸಿಗುವಂತಾಗಿದೆ. ವಿದ್ಯಾರ್ಥಿಗಳಿಗೆ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಗೇಟ್ ಟ್ಯೂಟರ್, ಎನ್ ಪಿ ಟಿ ಎಲ್, ಟಿ ಸಿ ಎಸ್ ಐ ಆನ್, ಕೋರ್ಸ್ ಎರಾ ವನ್ನು ನೀಡುತ್ತಿದೆ.

ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನಕ್ಕೆ ಆವಶ್ಯವಿರುವ ತರಬೇತಿಯನ್ನು ಮಹಾವಿದ್ಯಾಲಯವು ನೀಡುತ್ತಾ ಬಂದಿದ್ದು, ಇದರ ಫಲವಾಗಿ ವಿದ್ಯಾರ್ಥಿಗಳು ಹೆಸರಾಂತ ಕಂಪನಿಗಳಾದ ಇನೊಶೆಲಿಸ್, ವಿಪ್ರೋ, ಕ್ಯಾಪ್ ಜಿಮಿನಿ, ಎಕ್ಸ್ಲೆಂಚರ್, ಟಿಸ್ ಮಹೆಂದ್ರ, ಸ್ಟೋಲಾರ್, ಆಟೋಡ್, ಕೆ ಪಿ ಐ ಟಿ, ಡೆಲ್ಲೋಯಿಟ್, ಮೈಂಡ್ ಟ್ರಿ, ಜೆಸಿಬಿ, ಐಬಿಎಂ, ಟಿ ಸಿ ಎಸ್, ಹಿಟಾಚಿ,ಎಚ್ ಸಿ ಎಲ್, ಗ್ರೋ ಟಚ್, ಫಿಸ್ಟ್ ಮೋರ್ಟ್, ಪ್ರಗತಿ ಇಂಡಸ್ಟ್ರೀಲ್, ಡೆಸಾಫ್ಟ್, ಮುಂತಾದವುಗಳಲ್ಲಿ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ಆಂಗ ಸಂಸ್ಥೆಯಾದ ಕೆ-ಟೆಕ್ ನೈಸ್ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಮಾಜೋಪಯೋಗಿ ಯೋಜನಾ ಕಾರ್ಯಗಳಿಗೆ 25ಲಕ್ಷಕ್ಕೂ ಅಧಿಕ ಧನಸಹಾಯವನ್ನು ನೀಡಿದೆ. ವಿದ್ಯಾರ್ಥಿಗಳ ಸೃಜನಾತ್ಮಕ ಹಾಗೂ ಸಮಾಜಪಯೋಗಿ ಯೋಜನಾ ಕಾರ್ಯಗಳಿಗೆ ವಿಜನ್ ಗ್ರೂಪ್ ಆನ್ ಸೈನ್ಸ್ ಅಂಡ್ ಟೆಕ್ನಾಲಜ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಧನಸಹಾಯ ನೀಡಿ ಮರಸ್ಕರಿಸಿದೆ. ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರದ ಕೌಶಲ್ಯಗಳನ್ನು ನೀಡಲು ಮತ್ತು ಇಂಟ್ರನ್ಶಿಪ್ ಸೌಲಭ್ಯಗಳನ್ನು ಹೊಂದಲು ಮಹಾವಿದ್ಯಾಲಯವು ಪ್ರತಿಷ್ಠಿತ ಕಂಪನಿಗಳಾದ ಹೆಚ್ಸಿಎಲ್, ಎಚ್ಎಎಲ್, ಟೊಯೋಟಾ, ಟಾಟಾ ಟೆಕ್ನಾಲಜೆಸ್, ದೇಶಾಪಾಂಡೆ ಸ್ಟಾರ್ಟ್ ಆಪ್, ಎ ಡಬ್ಲೂ ಎಸ್ ಆಕಾಡೆಮಿ, ಬ್ಲೂಪಿನ್ಟ್ ಆಕಾಡೆಮಿ , ಸಿಸ್ಕೊ, ಎಬು ಸ್ಕಿಲ್ಸ್ ಮುಂತಾದವುಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಮಹಾವಿದ್ಯಾಲಯದ ಆವಿಷ್ಕಾರ ಪರಿಹಿತ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಅಭಿವೃದ್ಧಿಗಾಗಿ ನುರಿತ ಅನುಭವಿ ಉಪನ್ಯಾಸಕರುಗಳಿಂದ ಹಲವಾರು ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಮಹಾವಿದ್ಯಾಲಯವು ವಿದ್ಯಾರ್ಥಿಗಳಿಗೆ ನೀಡುತ್ತಿರುವ ಗುಣಮಟ್ಟದ ಶಿಕ್ಷಣ ಮತ್ತು ಕಲಿಕೆಗೆ ಪೂರಕವಾಗಲು ಒದಗಿಸಿರುವ ಸೌಲಭ್ಯಗಳನ್ನು ಗುರುತಿಸಿ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಯು ಮೊದಲನೇ ಆವತರಣಿಕೆಯಲ್ಲಿ "A" ಶ್ರೇಣಿಯನ್ನು ನೀಡಿರುವುದು ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ. ನವದೆಹಲಿಯ ಎಐಸ್ಟಿಲ್ ಸಂಸ್ಥೆಯು ತಿಕ್ಷಣ ಕ್ಷೇತ್ರದಲ್ಲಿನ ಗಣನೀಯ ಸಾಧನೆಗಾಗಿ, ಮಹಾವಿದ್ಯಾಲಯವನ್ನು ಸನ್ಮಾನಿಸಿದೆ.

ಮಹಾವಿದ್ಯಾಲಯವು ಗುಣಮಟ್ಟದ ತಾಂತ್ರಿಕ ತಿಕ್ಷಣ ನೀಡಲಷ್ಟೇ ಸಿಮಿತವಾಗಿರದೆ, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ನಿರುದ್ಯೋಗಿಗಳ ಕೌಶಲ್ಯ ಆಧಿವೃದ್ಧಿಪಿ ಉದ್ಯೋಗ ಸೃಷ್ಟಿಸುವ ಕಾರ್ಯವನ್ನು ಮಹಾವಿದ್ಯಾಲಯವು ಕೈಗೊಂಡಿದೆ.

ಕ್ರೀಡಾ ವಿಭಾಗ ದಲ್ಲಿ ವಿ ಡಿ ಐ ಟಿ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಷ್ಟೇ ಅಲ್ಲದೆ, ರಾಷ್ಟ್ರ ಮಟ್ಟದಲ್ಲಿ ವಿ ಟಿ ಯು ವನ್ನು ಪ್ರತಿನಿಧಿಸಿ ಗೌರವ ತಂದಿದ್ದಾರೆ. ಮಹಾವಿದ್ಯಾಲಯದ ವಿದ್ಯಾರ್ಥಿಗಳು ಆಂತಾರಾಷ್ಟೀಯ ಮಟ್ಟದ ಐ ಇ ಇ ಕೋರ್ಸ್, ಭಾರತೀಯ ತಂತ್ರಜ್ಞಾನ ಸಂಸ್ಥೆಯ ಹಲವಾರು ಕೋರ್ಸ್‌ಗಳನ್ನು ಯಶಸ್ವಿಯಾಗಿ ಪೂರ್ತಿಸಿದ್ದಾರೆ. ಒಟ್ಟಿನಲ್ಲಿ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ವಿ ಡಿ ಐ ಟಿ, ಉತ್ತರ ಕನ್ನಡ ಜಿಲ್ಲೆಯ ಜನರ ಹೆಮ್ಮೆ ಯಾಗಿದೆ.

ಸ್ಥಳೀಯ ಸರಕಾರಿ ಶಾಲಾ ಮಕ್ಕಳಿಗೆ ತಾಂತ್ರಿಕ ತಿಕ್ಷಣದ ಅರಿವು ಮೂಡಿಸಲು ಉಚಿತವಾಗಿ ಪುಸ್ತಕಗಳನ್ನು ವಿತರಿಸಿದೆ. ಹಿರಿಯ ನಾಗರಿಕರಿಗೆ ಗಣಕಯಂತ್ರ ಮತ್ತು ಮೊಬೈಲ್ ಬಳಕೆ ತರಬೇತಿಯನ್ನು ನೀಡಿದೆ. ವಾರ್ಷಿಕವಾಗಿ ಎರಡು ಬಾರಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳುತ್ತ ಬಂದಿದೆ. ಉನ್ನತ ಭಾರತ ಆಭಿಯಾನ್ ಮತ್ತು ಎನ್ ಎಸ್ ಎಸ್ ಘಟಕಗಳ ಮೂಲಕ ಸಮಾಜಪಯೋಗಿ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಜನಸಾಮಾನ್ಯರ ಪ್ರಸಂಶೆಗೆ ಪಾತ್ರವಾಗಿದೆ. ಕನ್ನಡ ನಾಡು ನುಡಿಯ ಸಂರಕ್ಷಣೆಗೆ ಸಂಘ ಒಂದು ಸದಸ್ಯತ್ವ 100 ಎಂಬ ಆಭಿಯಾನವನ್ನು ಕಲ್ಪವೃಕ್ಷ ಕನ್ನಡ ಸಂಘದ ವತಿಯಂದ ಹಮ್ಮಿಕೊಳ್ಳಲಾಗಿದೆ.

ಮಹಾವಿದ್ಯಾಲಯದಲ್ಲಿ ಕಲಿತು ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ಭಾರತೀಯ ಸೇನೆ, ಸರ್ಕಾರಿ ಸೇವಾ ವಿಭಾಗ, ಪ್ರತಿಷ್ಠಿತ ವಿದೇಶಿ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ವಿದ್ಯಾರ್ಥಿಗಳ ಮನಸ್ಥಿತಿಯರಿತು, ಕುಂದು ಕೊರತೆಗಳನ್ನು ನೀಗಿಸುವ ಸಮಾಲೋಚನಾ ಕಾರ್ಯಕ್ರಮವನ್ನು ಸಹ ನಡಸುತ್ತಿದೆ. ಮಹಾವಿದ್ಯಾಲಯವು ತಾಂತ್ರಿಕ ವಸ್ತುಗಳ ಸಂಗ್ರಹಾಲಯ "ಜಾಗೃತಿ"ಯನ್ನು ಹೊಂದಿದ್ದು, ವಿವಿಧ ಇಂಜನಿಯರಿಂಗ್ ವಿಭಾಗಗಳ ಸಲಕರಣೆಗಳನ್ನು ಇಲ್ಲಿ ಕಾಣಬಹುದಾಗಿದ್ದು, ವೋಲ್ವೋ ಕಂಪನಿಯ ಬಸ್ ಇಂಜನ್ ಪ್ರಮುಖ ಆಕರ್ಷಕೆಯಾಗಿದೆ. ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನವನ್ನು ನೀಡಲು ಕ್ರೀಷ್ಣತೆಯ ಕೇಂದ್ರವನ್ನು ಮಹಾವಿದ್ಯಾಲಯದಲ್ಲಿ ಸ್ಥಾಪಿಸಿದೆ. ಎಲೆಕ್ಟಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸುಧಾರಿತ ಕಂಪ್ಯೂಟಿಂಗ್ ಅಭಿವೃದ್ಧಿ ಕೇಂದ್ರ (ಸಿ-ಡಾಕ್)ವನ್ನು ಮಹಾವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆ. ವಿ ತಾ ವಿ ಬೆಳಗಾವಿಯು ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು ರಾಜ್ಯದ 15 ತಾಂತ್ರಿಕ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿದ್ದು, ವಿ ಡಿ ಐ ಟಿ ಯು ಇದರಲ್ಲಿ ಒಂದಾಗಿದೆ.

ಮಹಾವಿದ್ಯಾಲಯದ ಇಕೋ ಕ್ಲಬ್ ಮತ್ತು ಎನ್ಎಸ್ಎಸ್ ಘಟಕವು ಪರಿಸರ ಸಂರಕ್ಷಣಾ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ಸನ್ನಾಗಿ ಮಾಡಿದೆ. ವನಮಹೋತ್ಸವ, ಗ್ರಾಮ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜಕ್ಕೆ ಕೊಡುಗೆ ನೀಡುತ್ತಿದೆ. ಮಹಾವಿದ್ಯಾಲಯವು ಕಲುಷಿತ ನೀರನ್ನು ಶುದ್ಧೀಕರಿಸುವ ಘಟಕವನ್ನು ಹೊಂದಿದ್ದು, ಶುದ್ಧೀಕರಿಸಿದ ನೀರನ್ನು ಉದ್ಯಾನವನಕ್ಕೆ ಮರುಬಳಕೆ ಮಾಡುತ್ತಿರುವುದು ನೀರಿನ ಸಮರ್ಪಕ ನಿರ್ವಹಣೆಗೆ ಮಾದರಿಯಾಗಿದೆ. ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಮಹಾವಿದ್ಯಾಲಯದ ಆವರಣದಲ್ಲಿ ಮಳೆ ಕೊಯ್ಲನ್ನು ಆಳವಡಿಸಿಕೊಳ್ಳಲಾಗಿದೆ. ನವೀಕರಿಸಬಹುದಾದ ಶಕ್ತಿಯ ಮೂಲಗಳಲ್ಲೊಂದಾದ ಸೌರಶಕ್ತಿಯನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಮಹಾವಿದ್ಯಾಲಯದ ಮೇಲ್ಚಾವಣಿಯಲ್ಲಿ 200 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಶಕ್ತಿ ಘಟಕವನ್ನು ಸ್ಥಾಪಿಸಲಾಗಿದ್ದು, ಮಹಾವಿದ್ಯಾಲಯದ 70 ಪ್ರತಿಶತ ವಿದ್ಯುತ್ ಬೇಡಿಕೆಯನ್ನು ಈ ಘಟಕವು ಪೂರೈಸುತ್ತಿದೆ. ಆಷ್ಟೇ ಅಲ್ಲದೆ ಈ ಘಟಕವು ವಾತಾವರಣದಲ್ಲಿನ ಇಂಗಾಲದ ಡೈಯಾಕ್ಸೈಡ್ ಪ್ರಮಾಣವನ್ನು ಸಹ ತಗ್ಗಿಸಿದೆ. ಮಹಾವಿದ್ಯಾಲಯದ ವಿಶಾಲವಾದ ಕ್ಯಾಂಪಸ್ 250ಕ್ಕೂ ಅಧಿಕ ವಿಶೇಷ ಸಸ್ಯ ಸಂಕುಲಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳಲ್ಲಿ ಸಸ್ಯ ಸಂಕುಲದ ಅರಿವು ಮೂಡಿಸಲು ಪ್ರತಿಯೊಂದು ಮರಗಳಿಗೆ ಕ್ಯೂ. ಆರ್. ಕೋಡ್ ಗಳನ್ನು ಅಳವಡಿಸಲಾಗಿದ್ದು, ಇದರ ಮೂಲಕ ಸಸ್ಯದ ಸಂಪೂರ್ಣ ಮಾಹಿತಿಯನ್ನು ತಿಳಿಯಬಹುದಾಗಿದೆ. ಮಹಾವಿದ್ಯಾಲಯವು ವನಸ್ಪತಿ ಔಷಧಿ ಸಸ್ಯಗಳ ವನ "ಸಸ್ಯ ಕಾಶಿ" ಯನ್ನು ಹೊಂದಿದ್ದು, ಆಮೃತಬಳ್ಳಿ, ತುಳಸಿ, ಲೋಳೆಸರ, ಬಿಲ್ವಪತ್ರೆ, ಒಂದೆಲಗ ಮುಂತಾದ ವನಸ್ಪತಿ ಸಸ್ಯಗಳನ್ನು ಒಳಗೊಂಡಿದೆ.ಮಹಾವಿದ್ಯಾಲಯದಲ್ಲಿ ಹಣಕಾಸಿನ ವ್ಯವಹಾರವನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲಾಗಿದ್ದು, ನಗದು ಮುಕ್ತ ವ್ಯವಹಾರಕ್ಕೆ ಅನುಕೂಲಕರವಾಗಿದೆ.

Main Edition Edition
Aug 11, 2024 Page No. 6
Powered by: